**ದಿನಾಂಕಃ 06.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಹೆಚ್.ಬಿ.ಆರ್.ಕೆ. ವಕೀಲರಿಂದಃ**

2. ನಮ್ಮ ತಂದೆಯವರು ಬದುಕಿದ್ದಾಗಲೇ ನಾನು ಮತ್ತು ನನ್ನ ಅಕ್ಕ-ತಂಗಿಯರು ಎಲ್ಲರೂ ಸೇರಿ ಹೊಸಪೇಟೆಯ ಹಿರಿಯ ವಿಭಾಗ ನ್ಯಾಯಾಲಯದಲ್ಲಿ ಪಾಲುವಿಭಾಗಕ್ಕಾಗಿ ಓ.ಎಸ್. ನಂ.166/2000 ದಾವೆಯನ್ನು ಸಲ್ಲಿಸಿದ್ದೆವು ಎಂದರೆ ಸರಿ. ಆ ದಾವೆ ಸಲ್ಲಿಸುವ ಮುಂಚೆಯೇ ನನ್ನ ತಂದೆಯ ಅಣ್ಣ-ತಮ್ಮಂದಿರು ಸಲ್ಲಿಸಿದ್ದ ಪಾಲುವಿಭಾಗದ ದಾವೆ ವಿಚಾರಣೆ ನಡೆಯುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಓ.ಎಸ್. ನಂ. 166/2000 ದಾವೆಯು ಹಡಗಲಿಯಲ್ಲಿ ಹಿರಿಯ ವಿಭಾಗ ನ್ಯಾಯಾಲಯ ಸ್ಥಾಪನೆಯಾದ ನಂತರ ಹೊಸಪೇಟೆಯಿಂದ ಇಲ್ಲಿಗೆ ವರ್ಗಾವಣೆಯಾಗಿ ಈ ನ್ಯಾಯಾಲಯದಿಂದ ನಮಗೆಲ್ಲಾ ಕೋರ್ಟ್ ನೋಟೀಸ್ ಬಂದಿತ್ತು ಎಂದರೆ ನಮಗೆ ನೋಟೀಸ್ ಮುಟ್ಟಿಲ್ಲ. ಓ.ಎಸ್. ನಂ. 14/2018 ರಲ್ಲಿ ನಾವು ನಮ್ಮ ಪರವಾಗಿ ವಕೀಲರನ್ನು ನೇಮಕ ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ನಾವು ಆ ದಾವೆಯಲ್ಲಿ ನಮ್ಮ ವಕೀಲರನ್ನು ನೇಮಕ ಮಾಡಿಕೊಂಡಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರ ಆದೇಶ ಪುಟಗಳಲ್ಲಿ ದಿನಾಂಕ 16.09.2022 ರಂದು ಈ ನ್ಯಾಯಾಲಯ ವಾದಿಗಳಾಗಿದ್ದ ನಮಗೆ ಕೋರ್ಟ್ ನೋಟೀಸ್ ಜಾರಿ ಮಾಡಿತ್ತು ಎಂದರೆ ಸಾಕ್ಷಿಯು ನಾವೆಲ್ಲಾ ನಮ್ಮ ನಮ್ಮ ಗಂಡನ ಮನೆಗಳಲ್ಲಿ ಇದ್ದಿದ್ದರಿಂದ ನೋಟೀಸ್ ತಲುಪಿಲ್ಲ ಎಂದು ಹೇಳಿದ್ದಾರೆ. ದಿನಾಂಕ 01.10.2022 ರಂದು ಓ.ಎಸ್. ನಂ. 14/2018 ರಲ್ಲಿ ವಾದಿಗಳಾದ ನಮ್ಮನ್ನು ಪ್ರತಿನಿಧಿಸುತ್ತಿದ್ದ ವಕೀಲರು ನಮಗೆ ನೋಟೀಸ್ ನೀಡಿದರೂ ಸಹಾ ನಾವು ಯಾವುದೇ ಸೂಚನೆ ನೀಡಿಲ್ಲವೆಂದು ಕೋರ್ಟ್ ಮುಂದೆ ಹೇಳಿದ ಸಬ್ಮಿಶನ್ ಪ್ರಕಾರ ನ್ಯಾಯಾಲಯ ದಾವೆಯನ್ನು ವಜಾ ಮಾಡಿದೆ ಎಂದರೆ ವಕೀಲರು ಕೋರ್ಟ್ ಮುಂದೆ ಸಬ್ಮಿಟ್ ಮಾಡಿದ ವಿಚಾರದ ಬಗ್ಗೆ ನಮಗೆ ಗೊತ್ತಿಲ್ಲ. ನಾನು ಹೇಳುತ್ತೇನೆ, 2023 ರಲ್ಲಿ ನಾವು ಬೇರೆ ವಕೀಲರನ್ನು ನೇಮಕ ಮಾಡಿಕೊಂಡು ಈ ಅರ್ಜಿಯನ್ನು ಸಲ್ಲಿಸಿದ್ದೇವೆ. ನನ್ನ ತಾತನ ಆಸ್ತಿಯಲ್ಲಿ ನನ್ನ ತಂದೆಗೆ ಇದ್ದ ಪಾಲುವಿಭಾಗದ ಹಿಸ್ಸೆಯ ಬಗ್ಗೆ ಹಿಂದಿನ ದಾವೆಯಲ್ಲಿ ತೀರ್ಮಾನವಾಗಿ ಅದರ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಅಪೀಲಿನಲ್ಲೂ ಅಂತಿಮವಾಗಿ ತೀರ್ಮಾನವಾಗಿರುವ ಕಾರಣ ನಮಗೆ ಈ ಅರ್ಜಿ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಆಗ ತೀರ್ಮಾನವಾಗಿರುವ ವಿಚಾರಗಳ ಬಗ್ಗೆ ನಮಗೆ ಗೊತ್ತಿಲ್ಲ ಆದರೆ ನಮಗೆ ಆಸ್ತಿ ಬೇಕು. ವಾದಿಗಳಾದ ನಮಗೆ ನಮ್ಮ ತಂದೆ ಮತ್ತು ನಮ್ಮ ತಂದೆಯ ಅಣ್ಣ-ತಮ್ಮಂದಿರ ಬಗ್ಗೆ ದ್ವೇಷವಿತ್ತು ಎಂದರೆ ಹೌದು, ಅವರ ಬಗ್ಗೆ ನಮಗೆ ಆಗುತ್ತಿರಲಿಲ್ಲ. ಆದ್ದರಿಂದ, ನಾವು ನಮ್ಮ ತಂದೆ ಮತ್ತು ಅವರ ಅಣ್ಣ-ತಮ್ಮಂದಿರ ವಿರುದ್ಧ ತೊಂದರೆ ಕೊಡುವ ಉದ್ದೇಶಕ್ಕಾಗಿ ಮಾತ್ರ ದಾವೆ ಹಾಕಿರುವುದರಿಂದ ನಮಗೆ ಈ ಅರ್ಜಿಯಲ್ಲಿ ಯಾವುದೇ ಪರಿಹಾರ ಪಡೆಯಲು ಅರ್ಹತೆ ಇಲ್ಲ ಎಂದರೆ ಸರಿಯಲ್ಲ. ಓ.ಎಸ್. ನಂ. 14/2018 ನ್ನು ಪುನಃಸ್ಥಾಪನೆ ಮಾಡಲಿಕ್ಕೆ ನಾವು ಯಾವುದೇ ಸೂಕ್ತ ಕಾರಣಗಳನ್ನು ಒದಗಿಸಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ, ಈ ಅರ್ಜಿ ವಜಾ ಯೋಗ್ಯವಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**